3. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮಿಗೋಸ್ಕರ ಸವಾಲ್ ಮಾಡುತ್ತಾರೆಯೇ ಅಥವಾ ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುತ್ತಾರೆಯೆ ತಿಳಿಸಬೇಕು. ಇತರರ ಯೇಜಂಟುಗಳಾಗಿ ಸವಾಲ್ ಮಾಡುವವರಾಗಿ ಯಿದ್ದರೆ ಅವರಿಂದ ರುಜು ಮಾಡಲ್ಪಟ್ಟ ಮೊ ಖ್ತ್ಯಾರ್‌ನಾಮೆಯನ್ನ ಹಾಜರ್ಮಾಡಬೇಕು, ಹಾಗೆ ಹಾಜರ್ಮಾಡದೆ ಇದ್ದರೆ ಅಂಥಾವರ ಸವಾಲಗಳು ತಿರಸ್ಕರಿಸಲ್ಪಡುವದು.

ಈ ಹರಾಜು ದಿವಾನ್ ಸ್ಟಾಪೇಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

ಸಿ. ಸುಬ್ಬರಾವ್,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 117.

ಮೃತಪಟ್ಟ ಪುಟ್ಟಮ್ಮನವರ ಆಸ್ತೀ ವಿಷಯದಲ್ಲಿ:—

ಅರ್ಜೀದಾರ ರಾಮಸ್ವಾಮಯ್ಯನವರು, ಮೃತಪಟ್ಟ ಸದರೀ ಪುಟ್ಟಮ್ಮನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಬೆಟ್ಟದಪುರದ ಸ್ಥಳದ ಸದರೀ ರಾಮಸ್ವಾಮಯ್ಯನವರು ಅರಕಲ್‌ಗೂಡು ತಾಲ್ಲೂಕು ಮಲ್ಲದಾಸಪಾಳ್ಯದಲ್ಲಿ ವಾಸಸ್ಥರಾಗಿದ್ದು ಮೃತಪಟ್ಟ ಪುಟ್ಟಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಸ್ವಾಮಯ್ಯನವರ ಅರ್ಜೀಯನ್ನ 1887ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 118.

ಮೃತಪಟ್ಟ ನಾಗಂಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಪದ್ಮರಾಜಯ್ಯನವರು, ಮೃತಪಟ್ಟ ಸದರೀ ನಾಗಂಣನವರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಸಾಲಿಗ್ರಾಮದ ಸ್ಥಳದ ಸದರೀ ಪದ್ಮರಾಜಯ್ಯನವರು ಸದರೀ ವಾಸಸ್ಥರಾಗಿ ಮೃತಪಟ್ಟ ನಾಗಂಣನವರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟುಮೇರಿಗೆ ಸರಟಿಫಿಕೇಟ್ ಬಗ್ಯೆಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪದ್ಮರಾಜಯ್ಯನವರ ಅರ್ಜೀಯನ್ನು 1887ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 119.

ಮೃತಪಟ್ಟ ಗುಂಡಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಶಾಂತಮ್ಮನವರು ಮೃತಪಟ್ಟ ಸದರೀ ಗುಂಡಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ಮೊಹಲಾ ಸ್ಥಳದ ಸದರೀ ಶಾಂತಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ಗುಂಡಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಾಂತಮ್ಮನವರ ಅರ್ಜಿಯನ್ನು 1887ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುಂಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಮಾರ್ಚೀ ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1887ನೇ ಇಸವಿ ಮಿಸಲೇನಿಯಸ್ ನಂಬರ್ 138.

ಮೃತಪಟ್ಟ ವೆಂಕಟರಮಣಯ್ಯ ವುರಫ್ ತಮ್ಮಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಶಾಮಯ್ಯ ಮೈನರ್‌ಗಾರ್ಡಿಯ್ ತಾಯಿ ಸಾವಿತ್ರಮ್ಮ, ಮೃತಪಟ್ಟ ಸದರೀ ವೆಂಕಟರಮಣಯ್ಯ ವುರಫ್ ತಮ್ಮಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಅರಕಲ್‌ಗೂಡು ತಾಲ್ಲೂಕು ಕೃಷ್ಣರಾಜಕಟ್ಟೆ ಹೋಬಳಿ ರುದ್ರಪಟ್ಟಣದ ಸ್ಥಳದ ಸದರೀ ಮೈನರ್‌ಗಾರ್ಡಿಯ್ ತಾಯಿ ಸಾವಿತ್ರಮ್ಮನು ಸದರೀ ವಾಸಸ್ಥರಾಗಿ ಮೃತಪಟ್ಟ ವೆಂಕಟರಮಣಯ್ಯ ವುರಫ್ ತಮ್ಮಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮ್ಯಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಸಾವಿತ್ರಮ್ಮನವರ ಅರ್ಜಿಯನ್ನು 1887ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣಯ್ಯ ವುರಫ್ ತಮ್ಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಾರ್ಚ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಫಾರೆಸ್ಟ್ ಇಲಾಖಾ.

ತಾರೀಖು 27ನೇ ಫಿಬ್ರವರೀ 1887.

ಹಾಸನದ ಡಿಸ್ಟ್ರಿಕ್ಟಿನಲ್ಲಿ ಗವರ್ಮೆಂಟ್ ಫಾರೆಸ್ಟುಗಳಿಂದಲೂ ಹಿಡುವಳೀ ಜಮೀರ್ಗಳಿಂದಲೂ, 1887—88ನೇ ಮುಂದಿನ ಸಾಲ್ಕಾರ್ ಸಾಲಿನಲ್ಲಿ ಇದರಡೀಕಂಡ ತೇದಾದುವುಳ್ಳ ವಣಗಿದ ಗಂಧದಮರಗಳು ಮತ್ತು ಹಳೆ ಗಂಧದ ಮರದ ಬೇರುಗಳನ್ನು ಕ್ರಮವಾಗಿ ಚೆಕ್ಕಿ ತಯಾರ್ಮಾಡಿ ಅಂದರೆ ಮೇಲ್‌ಗಡೆ ಸ್ವಲ್ಪ ಬಿಳಿಮರ ಸಹಿತವಾಗಿ ಕಂಟ್ರಾಕ್ಟು ಮೂಲಕ ಜಮಾಯಿಸಿ ಹಾಸನದ ಸಂದಲ್ ಕೋಠಿಯಲ್ಲಿ ಒಪ್ಪಿಸುವ ಬಗ್ಯೆ ಇದರ ದೆಶೆಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತ್ತವೆ.

		ಟ್ಟ್ಗಳು.
1.	ಹಾಸನ ತಾಲ್ಲೂಕು ಗ್ರಾಮದ ಸಬ್ ತಾಲ್ಲೂಕು ದೇವೀಲ್	40
2.	ಅರಸೀಕೆರೆ ತಾಲ್ಲೂಕು	30
3.	ಚನ್ನರಾಯಪಟ್ಟಣ ತಾಲ್ಲೂಕು	10
4.	ಹೊಳೇನರಸೀಪುರ ಡಿಟೋ	10
5.	ಅರಕಲ್‌ಗೂಡು ಡಿಟೋ	40
6.	ಮಂಜರಾಬಾದ್ ಡಿಟೋ	60
7.	ಬೇಲೂರು ಡಿಟೋ	60
	ಜುಮ್ಲಾ	250

2. ದರಖಾಸ್ತುಗಳು "ಹಾಸನದ ಕೋಠೀಗೆ ವಣಗಿದ ಗಂಧದ ಮರಗಳನ್ನೂ ಹಳೇ ಗಂಧದಮರದ ಬೇರುಗಳನ್ನೂ ಸರಬರಾಯಿ ಮಾಡುವ ಬಗ್ಯೆ ದರಖಾಸ್ತು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ಸರಬರಾಯಿ ಮಾಡುವ ಬಗ್ಯೆ ವಪ್ಪಿಕೊಳ್ಳುವ ತೇದಾದಿನ ಮೇಲೆ ದರ ಟ್ಟ್ ವಂದಕ್ಕೆ ನಾಲ್ಕು ರೂಪಾಯಿ ಮೇರೆ ಆಗುವ ಮೊಬಲಗನ್ನ ನಗದಾಗಿಯಾಗಲೀ ಕರ್ಚೆಸಿ ನೋಟಿನ ಮೂಲಕವಾಗಿಯಾಗಲೀ ದರಖಾಸ್ತಿನೊಡನೆ ಕಳುಹಿಲ್ಪಟ್ಟ ಹೊರ್ತು ಅನ್ಯಥಾ ಯಾವ ದರಖಾಸ್ತೂ ಅಂಗೀಕರಿಸಲ್ಪಡಲಾರದು.

4. ಪ್ರತಿದರಖಾಸ್ತಿನಲ್ಲಿಯೂ, ದರಖಾಸ್ತುದಾರನು ವಣಗಿದ ಮರಗಳಿಗೂ ಮತ್ತು ಹಳೇ ಬೇರುಗಳಿಗೂ ಅವುಗಳು ತಯಾರ್ಮಾಡಿ ವಿಂಗಡಿಸಲ್ಪಟ್ಟ ತರುವಾಯ ಕೋಠೀಯಲ್ಲಿ ತೂಕಮಾಡಲ್ಪಟ್ಟು ದಾಸ್ತ್ ಮಾಡಲ್ಪಟ್ಟ ತೇದಾದಿಗೆ ದರ ಟ್ಟ್ ವಂದಕ್ಕೆ ಖಾಯಿಷ್ ಮಾಡುವ ಬೇರೆಬೇರೆ ಕಮ್ಮಿದರವನ್ನು ನಮೂದಿಸತಕ್ಕದ್ದು.